ಶ್ರೀ ಎಂ.ಸಿ ಅಪ್ಪಚ್ಚು ರಂಜನ್ : ಜನಾರ್ಧನ್‌ಹಳ್ಳಿ ಎಂಬ ಗ್ರಾಮ ಈಗಾಗಲೇ ಶೀತ ಪ್ರದೇಶವೆಂದು ಘೋಷಣೆ ಮಾಡಿದ್ದಾರೆ. ಅವರಿಗೆ ಕೂಡ ಯವುದೇ ಸೌಲಭ್ಯವನ್ನು ಒದಗಿಸಿಕೊಡಲಿಲ್ಲ; ಇದರ ಬಗ್ಗೆ ಹೋರಾಟ ಮಾಡಿ ಸುಮಾರು ಹತ್ತು ವರ್ಷಗಳಾಯಿತು. ಕಳೆದ ವಿಧಾನಸಭೆ ಮತ್ತು ಅದರ ಹಿಂದಿನ ವಿಧಾನಸಭೆಯಲ್ಲಿ ಕೂಡ ಸನ್ಮಾನ್ಯ ಬಿಳ್ಳಿಯಪ್ಪನವರು ನಮ್ಮ ತಾಲ್ಲೂಕಿನ ಮಂತ್ರಿಗಳು ಹಾಗೂ ಶಾಸಕರಾಗಿದ್ದರು. ಆಗಲೂ ಕೂಡ ಭರವಸೆ ಕೊಡಲಾಯಿತೇ ಹೊರತು, ಇದುವರೆಗೂ ಪರಿಹಾರ ಕೊಡಲಿಲ್ಲ. ಈಗ ಆ ಜನಾರ್ಧನಹಳ್ಳಿಯನ್ನೂ ಸೇರಿಸಿ, ಷಿಫ್ಟ್ ಮಾಡುವಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಜನಾರ್ಧನಹಳ್ಳಿ ಶೀತ ಪ್ರದೇಶವೆಂಬುದನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದಿದ್ದಾರೆ. ಆ ಬಗ್ಗೆ ವಿಚಾರ ಮಾಡುತ್ತೇವೆ; ಅದನ್ನು ಪರಿಶೀಲನೆ ಮಾಡಿ, ಅದು ಅತ್ಯಂತ ಅನಿವಾರ್ಯವಾಗಿದ್ದರೆ, ತಾವು ಸಲಹೆ ಕೊಟ್ಟಿದ್ದನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ ಮಾಡುತ್ತೇವೆ;

ಮೋದಿ ಜೆರಾಕ್ಸ್ ಕಂಪನಿಯಿಂದಾದ ತೆರಿಗೆ ವಂಚನೆ

350 (3218) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಹಣಕಾಸು ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೋದಿ ಜೆರಾಕ್ಸ್ ಕಂಪನಿಯಿಂದ ಕಳೆದ 5 ವರ್ಷಗಳಲ್ಲಿ ಕರ್ನಾಟಕಕ್ಕೆ ಬಂದ ಜೆರಾಕ್ಸ್ ಯಂತ್ರಗಳ ಒಟ್ಟು ಸಂಖ್ಯೆ ಎಷ್ಟು;

ಆ) ಇದರಿಂದ ರಾಜ್ಯಕ್ಕೆ ಸಂದಾಯವಾದ ಮಾರಾಟ ತೆರಿಗೆ, ಪ್ರವೇಶ ತೆರಿಗೆ, ವಹಿವಾಟು ತೆರಿಗೆಯ ಮೊತ್ತ ಎಷ್ಟು;

ಇ) ಇದು ಕರ್ನಾಟಕ ರಾಜ್ಯಕ್ಕೆ ಬಂದ ಯಂತಗಳ ಸಂಖ್ಯೆಗೆ ತಕ್ಕಂತೆ ಸಂದಾಯವಾಗಿದೆಯೇ?

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು)

ಅ) ಕಂಪನಿಯು ಮಾರಾಟ ಅಥವಾ ಬೋಗ್ಯಕ್ಕಾಗಿ ಕರ್ನಾಟಕಕ್ಕೆ ಕಳೆದ ಐದು ವರ್ಷಗಳಲ್ಲಿ ತಂದಂತಹ ಯಂತ್ರಗಳ ಸಂಖ್ಯೆ 3048 ಆಗಿರುತ್ತದೆ.

ಆ) ಇದರಿಂದ ರಾಜ್ಯಕ್ಕೆ ಈ 5 ವರ್ಷಗಳಲ್ಲಿ ಸಂದಾಯವಾದ ತೆರಿಗೆಗಳ ವಿವರಣೆ ಈ ಕೆಳಕಂಡಂತಿದೆ:-

ಅಂದಾಜು ರೂ.ಲಕ್ಷಗಳಲ್ಲಿ

1) ಮಾರಾಟ ತೆರಿಗೆ	-	129.85
2) ವಹಿವಾಟು ತೆರಿಗೆ	-	68.89
3) ಪ್ರವೇಶ ತೆರಿಗೆ	-	8.04
ಒಟ್ಟು		206.78

ಇದಲ್ಲದೆ ಮೋದಿ ಜೆರಾಕ್ಸ್ ಯಂತ್ರಗಳನ್ನು ಭೋಗ್ಯಕ್ಕೆ ಕೊಟ್ಟಾಗ ಅವುಗಳ ಮೇಲೆ ಆಗತಕ್ಕ ಭೋಗ್ಯ ತೆರಿಗೆ (ಲೀಸಿಂಗ್) ಯನ್ನು ಕಳೆದ 5 ವರ್ಷಗಳಲ್ಲಿ ಅಂದಾಜು ರೂ. 51.61 ಲಕ್ಷಗಳಷ್ಟು ಸಂದಾಯವಾಗಿರುತ್ತದೆ.

ಇ) ಕರ್ನಾಟಕ ರಾಜ್ಯಕ್ಕೆ ಬಂದುಮಾರಾಟವಾದ ಯಂತ್ರಗಳಿಗೆ ತಕ್ಕಂತೆ ಆ ಯಂತ್ರಗಳ ಮೇಲಿನ ಮಾರಾಟ ತೆರಿಗೆ, ವಹಿವಾಟು ತೆರಿಗೆ ಹಾಗೂ ಪ್ರವೇಶ ತೆರಿಗೆ ಪೂರ್ಣವಾಗಿ ಸಂದಾಯವಾಗಿರುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಮೋದಿ ಜೆರಾಕ್ಸ್ ಕಂಪನಿಯಿಂದ ಕರ್ನಾಟಕ ರಾಜ್ಯಕ್ಕೆ ಬರುತ್ತಿರುವಂತಹ ಯಂತ್ರಗಳ ಬಗ್ಗೆ ನಾನು ಪ್ರಶ್ನೆ ಕೇಳುತ್ತಿದ್ದೇನೆ. ಸರ್ಕಾರದವರು ಹೇಳಿದ್ದಾರೆ, 3048 ಯಂತ್ರಗಳು ಬಂದಿವೆ ಎಂದು ನನಗೆ ಬಂದಿರುವ ಮಾಹಿತಿ ಪ್ರಕಾರ ಕಳೆದ 5 ವರ್ಷಗಳಲ್ಲಿ ಸುಮಾರು 10 ಸಾವಿರ ಯಂತ್ರಗಳು ಕರ್ನಾಟಕ ರಾಜ್ಯಕ್ಕೆ ಬಂದು ಮಾರಾಟವಾಗಿವೆ. ಆದರೆ ಸ್ಥಳೀಯ ಮಾರಾಟ ತೆರಿಗೆ, ಪ್ರವೇಶ ತೆರಿಗೆ, ವಹಿವಾಟು ತೆರಿಗೆಯ ಸರಿಯಾದ ಅಂಕಿಅಂಶಗಳನ್ನು ತೋರಿಸದೇ ಅವರು ತೆರಿಗೆಯನ್ನು ವಂಚಿಸುತ್ತಾ ಇರುವುದರಿಂದ ರಾಜ್ಯ ಸರ್ಕಾರಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ನಷ್ಟವಾಗಿದೆ ಎನ್ನುವ ಮಾಹಿತಿ ನನಗೆ ಬಂದಿರುವುದನ್ನು ಸರ್ಕಾರಕ್ಕೆ ತಿಳಿಸುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಎಸ್. ಶಿವಣ್ಣ: ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ಮೋದಿ ಜೆರಾಕ್ಸ್ ಯಂತ್ರಗಳು ಬಂದಿರತಕ್ಕಂಥಾದ್ದರಲ್ಲಿ ಎರಡು ವಿಧಗಳು ಇವೆ. ಕಂಪನಿಂದ ಬಂದಿರತಕ್ಕಂಥಾದ್ದು 2450 ಯಂತ್ರಗಳು ಮತ್ತು ಮೋದಿ ಫೈನಾನ್ಷಿಯಲ್ ಸರ್ವೀಸ್ ಡೆಲ್ಲಿ ಎಂದು ಒಂದು ಸಂಸ್ಥೆ ಇದೆ. ಇದರಿಂದ ಬಂದಿರತಕ್ಕಂಥಾದ್ದು 59 ಯಂತ್ರಗಳು. ಒಟ್ಟು 3048 ಯಂತ್ರಗಳು ಬಂದಿರತಕ್ಕಂಥಾದ್ದು, ಎಂದು ಮಾನ್ಯ ಸದ್ಸಯರ ಗಮನಕ್ಕೆ ತರುವುದಕ್ಕೆ ನಾನು ಇಚ್ಛಿಪಡುತ್ತೇನೆ. ಇದರಲ್ಲಿ ತಮ್ಮ ಕಾಳಜಿ ಏನು ಎನ್ನತಕ್ಕಂಥಾದ್ದು ಕೂಡ ನನಗೆ ಅರ್ಥವಾಗುತ್ತದೆ. ತಾವು ರಾಜ್ಯಕ್ಕೆ 10 ಸಾವಿರ ಮೋದಿ ಜೆರಾಕ್ಸ್ ಯಂತ್ರಗಳು ಬಂದಿವೆ ಎನ್ನುವ ಮಾತನ್ನು ಏನು ಹೇಳುತ್ತಿದ್ದೀರಿ ; ಮೋದಿ ಜೆರಾಕ್ಸ್ ಕಂಪನಿಯಿಂದ ನೇರವಾಗಿ ಪಡೆದಂತ ಯಂತ್ರಗಳಿಗೆ ನಾವು ಯಾವುದೇ ತೆರಿಗೆಯನ್ನು ಇಲ್ಲಿ ವಿಧಿಸುವುದಕ್ಕೆ ಆಗುವುದಿಲ್ಲ. ಆದರೆ ಇಲ್ಲಿ ಮಾರಾಟಕ್ಕೆ ಅಂತ ತಂದ ಯಂತ್ರಗಳ ಮೇಲೆ ನಾವು ತೆರಿಗೆ ವಿಧಿಸಿರುವುದು ಸುಮಾರು 3048 ಯಂತ್ರಗಳು. ನಾವು ಎಷ್ಟು ಮಾರಾಟ ತೆರಿಗೆಯನ್ನು ವಿಧಿಸಿದ್ದೇವೆ, ಎಷ್ಟು ಪ್ರವೇಶ ತೆರಿಗೆಯನ್ನು ವಿಧಿಸಿದ್ದೇವೆ ಮತ್ತು ಎಷ್ಟು ವಹಿವಾಟು ತೆರಿಗೆಯನ್ನು ವಿಧಿಸಿದ್ದೇವೆ ಎನ್ನುವ ಬಗ್ಗೆ ಉತ್ತರವನ್ನು ತಮಗ ಕೊಟ್ಟಿದ್ದೇವೆ. ನೇರವಾಗಿ ಅವರು ಕಂಪನಿಯಿಂದ ಯಂತ್ರಗಳನ್ನು ಪಡೆದರೆ ಅದಕ್ಕೆ ತೆರಿಗೆ ವಿಧಿಸತಕ್ಕಂಥ ಜವಾಬ್ದಾರಿ ನಮಗೆ ಬರುವುದಿಲ್ಲ. ಅವರು ಇಲ್ಲಿ ಮಾರಾಟಕ್ಕೆ ಅಂತ ತಂದು ಅವರು ಇಲ್ಲಿ ಮಾರಾಟ ಮಾಡುವುದರ ಮೇಲೆ ನಾವು ತೆರಿಗೆಯನ್ನು ವಿಧಿಸುತ್ತೇವೆ. ಪ್ರವೇಶ ತೆರಿಗೆಯನ್ನು ವಿಧಿಸುತ್ತೇವೆ.

ಬಾಗೇಪಲ್ಲಿ ತಾಲ್ಲೂಕು ಪರಗೋಡು ಬಳಿ ಚಿತ್ರಾವತಿ ನದಿಗೆ ಅಣೆಕಟ್ಟು ನಿರ್ಮಾಣ

350 (3275) ಶ್ರೀ ಸಂಪಿಗಿ ಎನ್ (ಬಾಗೇಪಲ್ಲಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?